# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- 2017-18ನೇ ಸಾಲಿನಲ್ಲಿ **Bonded Labour Rehabilitation Fund at District Level(Corpus Fund)** ನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಕಾಇ/58/ಸಿಎಲ್‌ಸಿ/2017, ಬೆಂಗಳೂರು, ದಿನಾಂಕ-12/10/2017
2. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ-**F No S-11012/01/2015-BL(PC)** ದಿನಾಂಕ-17/1/2017.
3. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ- ಆಇ/41/ವೆಚ್ಚ-6/2017, ದಿನಾಂಕ-28/3/2017.
4. 2017-18ನೇ ಸಾಲಿನ ಆಯವ್ಯಯ ಸಂಪುಟ ಅಭಿಯಾಚನೆ ಸಂಖ್ಯೆ-23(ಲೆ.ಶಿ-2230-01-112-0-01).
5. ಜೀತದಾಳುಗಳ ಪುನರ್ವಸತಿ ಕುರಿತಂತೆ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿ ಕಛೇರಿ ಆದೇಶ ಸಂಖ್ಯೆ-**F No S-11012/01/2015**- ದಿನಾಂಕ-18/5/2016

<u>ಪ್ರಸ್ತಾವನೆ</u>

ಮೇಲೆ ಓದಲಾದ (5)ರ ಕೇಂದ್ರ ಸರ್ಕಾರದ ಜೀತದಾಳುಗಳ ಪುನರ್ವಸತಿ ಕಾರ್ಯಕ್ರಮದ ಪರಿಷ್ಕೃತ ಮಾರ್ಗಸೂಚಿಯ ಅಂಶ 5(13) ಮತ್ತು 5(14)ರನ್ವಯ ದೇಶದ ಎಲ್ಲಾ ರಾಜ್ಯ ಸರ್ಕಾರಗಳು ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಬಿಡುಗಡೆಹೊಂದಿದ ಜೀತದಾಳುಗಳ ಪುನರ್ವಸತಿ ಸಲುವಾಗಿ ತುರ್ತು ಪರಿಹಾರ ಅನುದಾನ ನೀಡಲು ಪ್ರತಿ ಜಿಲ್ಲೆಗೆ ರೂ 10.00 ಲಕ್ಷದಂತೆ **Bonded Labour Rehabilitation Fund(Corpus Fund)**ನ್ನು ಸ್ಥಾಪಿಸಲು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ. ಈ ಕಾರ್ಪಸ್ ನಿಧಿಯನ್ನು ಬಿಡುಗಡೆಯಾದಂತಹ ಜೀತದಾಳುಗಳ ತುರ್ತು ಪರಿಹಾರಕ್ಕೆ ಉಪಯೋಗಿಸತಕ್ಕದ್ದು ಎಂದು ತಿಳಿಸಿರುತ್ತಾರೆ.

ಆರಂಭದಲ್ಲಿ ಈ ಕಾರ್ಪಸ್ ನಿಧಿಯ ತುರ್ತು ಪರಿಹಾರ ಅನುದಾನ ಪ್ರತಿ ಜೀತದಾಳಿಗೆ ರೂ 5,000/-ಗಳೆಂದು ನಿಗಧಿಮಾಡಿದ್ದು, ಮೇಲೆ ಓದಲಾದ(2)ರ ಕೇಂದ್ರ ಸರ್ಕಾರದ ಕಛೇರಿ ಆದೇಶದನ್ವಯ ತುರ್ತು ಪರಿಹಾರ ಅನುದಾನವನ್ನು 17/1/2017ರಿಂದ ಅನ್ವಯವಾಗುವಂತೆ ರೂ 20,000/-ಕ್ಕೆ ಏರಿಸಿ ಪರಿಷ್ಕರಿಸಿರುತ್ತಾರೆ.

ಮೇಲೆ ಓದಲಾದ(5)ರ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ನಿರ್ದೇಶನದನ್ವಯ ರಾಜ್ಯ ಸರ್ಕಾರವು ಮೇಲೆ ಓದಲಾದ(4)ರಲ್ಲಿರುವಂತೆ ಲೆಕ್ಕ ಶೀರ್ಷಿಕೆ- 2230-01-112-0-01ರಡಿ ಒಟ್ಟು ರೂ 3.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿರುತ್ತದೆ ಹಾಗೂ ಮೇಲೆ ಓದಲಾದ(3)ರ

ಟಿಪ್ಪಣಿಯನ್ವಯ ಮೇಲೆ ವಿವರಿಸಲಾದ ಉದ್ದೇಶಕ್ಕಾಗಿ ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ.

ಜೀತದಾಳುಗಳ ಪುನರ್ವಸತಿ ಕಾರ್ಯಕ್ರಮವನ್ನು ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನ ಮಾಡುತ್ತಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆಯು ಆರ್ಥಿಕ ಇಲಾಖೆಯ ಪೂರ್ವಾನುಮತಿ ಪಡೆದು, ಮೇಲೆ ಓದಲಾದ(1)ರ ಸರ್ಕಾರದ ಆದೇಶದನ್ವಯ ಸದರಿ ಲೆಕ್ಕ ಶೀರ್ಷಿಕೆ- 2230-01-112-0-01ರಡಿ ಲಭ್ಯವಿರುವ ರೂ 3.00ಗಳ ಕೋಟಿ ಅನುದಾನವನ್ನು ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ತಲಾ ರೂ 10.00 ಲಕ್ಷದಂತೆ ಬಿಡುಗಡೆ ಮಾಡಿ, ಕಾರ್ಪಸ್ ನಿಧಿ ಉದ್ದೇಶಕ್ಕೆ ಬಳಸಿಕೊಳ್ಳಲು ತಿಳಿಸಿರುತ್ತದೆ.

ಮೇಲೆ ಓದಲಾದ(1)ರ ಸರ್ಕಾರದ ಆದೇಶದನ್ವಯ ಸದರಿ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ರೂ 3.00 ಕೋಟಿ ಅನುದಾನವನ್ನು ರಾಜ್ಯದ 30 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡುವ ಪ್ರಯುಕ್ತ ಈ ಆದೇಶ-

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/50/ಆರ್‌ಬಿಎಲ್/2016, ಬೆಂಗಳೂರು, ದಿನಾಂಕ- 30/10/2017

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಜೀತದಾಳುಗಳ ಪುನರ್ವಸತಿ ಕಾರ್ಯಕ್ರಮದಡಿ, ಕೇಂದ್ರ ಸರ್ಕಾರದ ನಿರ್ದೇಶನದನ್ವಯ ಬಿಡುಗಡೆ ಹೊಂದಿದ ಜೀತದಾಳುಗಳ ತುರ್ತು ಪರಿಹಾರಕ್ಕಾಗಿ **Bonded Labour Rehabilitation Fund at District level(Corpus Fund)**ನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಸ್ಥಾಪಿಸಲು 2017-18ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ- 2230-01-112-0-01ರಡಿ ಲಭ್ಯವಿರುವ ರೂ 3.00ಗಳ ಕೋಟಿ ಅನುದಾನವನ್ನು 30 ಜಿಲ್ಲಾಧಿಕಾರಿಗಳಿಗೆ ತಲಾ ರೂ 10.00 ಲಕ್ಷದಂತೆ ಹಂಚಿಕೆ ಮಾಡಿ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಬಳಕೆಮಾಡಲು ತಿಳಿಸಿದೆ:

1. ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಜೀತದಾಳುಗಳ ಪುನರ್ವಸತಿ ಯೋಜನೆಯಡಿ 18/5/2016ರ ನಂತರ ಬಿಡುಗಡೆಹೊಂದಿದ ಜೀತದಾಳುಗಳಿಗೆ ಕಾರ್ಪಸ್ ನಿಧಿಯಡಿ ಲಭ್ಯವಿರುವ ಅನುದಾನವನ್ನು ತುರ್ತು ಪರಿಹಾರ ಒದಗಿಸಲು ಮಾತ್ರ ಉಪಯೋಗಿಸಬೇಕು. ಅನ್ಯ ಉದ್ದೇಶಕ್ಕೆ ಬಳಕೆ ಮಾಡಲು ಯಾವುದೇ ಅವಕಾಶವಿರುವುದಿಲ್ಲ.

2. 18/5/2016 ರಿಂದ 16/1/2017ರ ಅವಧಿಯಲ್ಲಿ ಬಿಡುಗಡೆಹೊಂದಿದ ಜೀತದಾಳುಗಳಿಗೆ ಕಾರ್ಪಸ್ ನಿಧಿಯಡಿ ಲಭ್ಯವಿರುವ ಅನುದಾನದ ಪೈಕಿ ಪ್ರತಿ ಜೀತದಾಳಿಗೆ ರೂ 5,000/-ಗಳನ್ನು ಮಾತ್ರ ನೀಡಬೇಕು.

   17/1/2017ರ ನಂತರ ಬಿಡುಗಡೆಯಾದ ಜೀತದಾಳುಗಳಿಗೆ ಕೇಂದ್ರ ಸರ್ಕಾರದ ನಿರ್ದೇಶನದನ್ವಯ ಪ್ರತಿ ಜೀತದಾಳಿಗೆ ರೂ 20,000/-ಗಳನ್ನು ಮಾತ್ರ ನೀಡಬೇಕು.

   ಈ ಸಂಬಂಧ ಈ ಕಛೇರಿಯ ಪತ್ರ ಸಂಖ್ಯೆ- ಗ್ರಾಅಪ/13/ಆರ್‌ಬಿಎಲ್/2016, ದಿನಾಂಕ- 6/10/2017ರ ಹಾಗೂ ಅದರೊಂದಿಗೆ ಲಗತ್ತಿಸಿರುವ ಕೇಂದ್ರ ಸರ್ಕಾರದ ಆದೇಶಗಳನ್ನು ಓದಿ

ಅದರಂತೆ ಕ್ರಮವಹಿಸಲು ಸೂಚಿಸಿದೆ.

3. ಅನ್ಯ ರಾಜ್ಯ ಅಥವಾ ಸ್ವಂತ ರಾಜ್ಯಕ್ಕೆ ಸೇರಿದ ಜೀತವಿಮುಕ್ತರಿಗೆ ಈ ಕಾರ್ಪಸ್ ನಿಧಿಯಡಿ ಲಭ್ಯವಿರುವ ಅನುದಾನವನ್ನು ಮೇಲೆ ವಿವರಿಸಲಾದ ಅನುದಾನದ ಮಿತಿಯಲ್ಲಿ ಬಳಸಿಕೊಳ್ಳಬಹುದಾಗಿದೆ.

4. ಬಿಡುಗಡೆಹೊಂದಿದ ಜೀತದಾಳುಗಳಿಗೆ ಕಾರ್ಪಸ್ ನಿಧಿಯಡಿ ಅನುದಾನವನ್ನು ಹಂಚಿಕೆ ಮಾಡುವಾಗ **Account Payee Cheque** ಅಥವಾ **RTGS** ಮುಖೇನ ಮಾತ್ರವೇ ಅನುದಾನವನ್ನು ಹಂಚಿಕೆ ಮಾಡಬೇಕು.

5. ಉಪಯೋಗಿಸಿದ ಕಾರ್ಪಸ್ ನಿಧಿ ಅನುದಾನಕ್ಕೆ ಫಲಾನುಭವಿವಾರು ವಿವರ, ಚೆಕ್ ಸಂಖ್ಯೆ, ದಿನಾಂಕಗಳ ವಿವಿರ ಹಾಗೂ ಫಲಾಭವಿಯ ಸಹಿಯನ್ನು ಪಡೆಯಲು ಪ್ರತ್ಯೇಕ ವಹಿಯನ್ನು ಕಡ್ಡಾಯವಾಗಿ ಪ್ರತಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು ಹಾಗೂ ಮಾಹೆಯಾನ ಸದರಿ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಮಾಡಿದ ವಿವರಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

6. ಬಿಡುಗಡೆಯಾದ ಜೀತದಾಳುಗಳಿಗೆ ವೆಚ್ಚ ಮಾಡಿದ ಕಾರ್ಪಸ್ ನಿಧಿಯ ಅನುದಾನವನ್ನು ಫಲಾನುಭವಿವಾರು ಕ್ಲೈಮುಗಳನ್ನು ಸರ್ಕಾರಕ್ಕೆ ತಪ್ಪದೇ ಕಳುಹಿಸಬೇಕು. ವಹಿಯಲ್ಲಿರುವ ದಾಖಲಾತಿಗಳ ಪ್ರತಿಯನ್ನು ಸೇರಿದಂತೆ, ಕಾರಣ ಈ ಅನುದಾನವನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಮರುಪಾವತಿ**(Reimburse)** ಮಾಡುವುದು.

7. ಮಾರ್ಚ್ ಅಂತ್ಯಕ್ಕೆ ಜಿಲ್ಲಾ ಖಜಾನೆಗಳಿಂದ ಬಾಕಿ ಅನುದಾನದ ವಿವರವನ್ನು ಪಡೆದು ಜಿಲ್ಲಾಧಿಕಾರಿಗಳು ಉಳಿದ ಅನುದಾನದ ವಿವರವನ್ನು ಹಾಗೂ ಆಡಿಟ್ ವರದಿಗಳನ್ನು ಖಡ್ಡಾಯವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಲ್ಲಿಸಲು ತಿಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆರ್ಥಿಕ - ಆಇ/41/ವೆಚ್ಚ-6/2017, ದಿನಾಂಕ- 28/3.2017ರನ್ವಯವೇ ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

(ಎನ್ ಕೃಷ್ಣಪ್ಪ)

ನಿರ್ದೇಶಕರು (ಗ್ರಾಮೂಸೌ-2) ಹಾಗೂ

ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

karsgsy@gmail.com,phone-080 22353852.

ಇವರಿಗೆ:

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಬೆಂಗಳೂರು, ಕರ್ನಾಟಕ.
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
3. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿವಿ ಟವರ್ಸ್, ಅಂಬೇಡ್ಕರ್ ವೀದಿ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ

5. ಉಪನಿರ್ದೇಶಕರು, ಟಿ ಎನ್ ಎಮ್ ಸಿ, ಖನಿಜ ಭವನ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಕಂದಾಯ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ವಿಶೇಷಾಧಿಕಾರಿಗಳು(ಜಿಲ್ಲಾ ಪಂಚಾಯಿತಿ), ಆರ್ಥಿಕ ಇಲಾಖೆ, ವೆಚ್ಚ-6, ವಿಧಾನ ಸೌಧ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.
5. ನಿರ್ದೇಶಕರು, ಯೋಉಮಾ ವಿಭಾಗ, ಗ್ರಾಅಪ ಇಲಾಖೆ.
6. ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ.
7. ನಿರ್ದೇಶಕರು, ಗಣಕ ಕೋಶ, ಗ್ರಾಅಪ ಇಲಾಖೆ- ಇಲಾಖಾ ತಂತ್ರಾಂಶದಲ್ಲಿ ಪ್ರಕಟಿಸಲು ಕೋರಿ